
# ಬೆಳಕಿನ ಸಂಚಲನ

ಸಂಪುಟ 5, ಸಂಚಿಕೆ 6 | ದ್ವೈಮಾಸಿಕ ವಾರ್ತಾಪತ್ರ | ನವೆಂಬರ್–ಡಿಸೆಂಬರ್ 2017



**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಠ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷ ಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಫೆಬ್ರುವರಿ 11, 2001ರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ನಮ್ಮ ಗುರಿಗಳನ್ನು ತಲುಪಲು, ಸಹಜವಾಗಿಯೇ ನಾವು ಪ್ರಯತ್ನಗಳನ್ನು ಮಾಡಬೇಕು. ಬೇರೆ ಬೇರೆಯ ಎರಡು ಮಟ್ಟಗಳಲ್ಲೂ ನಾವು ಪ್ರಯತ್ನಗಳನ್ನು ಮಾಡಬೇಕು; ಒಂದು ಭೌತಿಕ ಮಟ್ಟದಲ್ಲಿ ಮತ್ತು ಇನ್ನೊಂದು ಆಧ್ಯಾತ್ಮಿಕ ಮಟ್ಟದಲ್ಲಿ. ಭೌತಿಕ ಮಟ್ಟದಲ್ಲಿ ಕೆಲಸವೇನು, ಸಮಸ್ಯೆಯೇನು ಎನ್ನುವುದು ನಮಗೆ ತಿಳಿದಿದೆ. ಅದಕ್ಕೆ ನಾವು ಗಮನ ಕೊಡುತ್ತೇವೆ. ಆಧ್ಯಾತ್ಮಿಕ ಮಟ್ಟದಲ್ಲಿ ನಾವು ಧ್ಯಾನ ಮಾಡಬೇಕು ಹಾಗೂ ಪ್ರಾರ್ಥನೆ ಮಾಡಬೇಕು. ದೇವರಿಂದ ಸಹಾಯ ಕೇಳಬೇಕು. ಒಂದು ಮಟ್ಟದಲ್ಲಿ ಮಾತ್ರವೇ ನಾವು ಪ್ರಯತ್ನಪಟ್ಟಾಗ, ಸಹಜವಾಗಿಯೇ, ತೃಪ್ತಿಕರವಾದ ಫಲಿತಾಂಶಗಳು ನಮಗೆ ಸಿಗದೇ ಇರಬಹುದು. ಆದ್ದರಿಂದ ನಾವು ಎರಡೂ ಮಟ್ಟಗಳಲ್ಲಿ ಪ್ರಯತ್ನ ಮಾಡಬೇಕು ಹಾಗೂ ಕಾಯಬೇಕು. ಕೆಲವು ಸಲ ನಮಗೆ ಸಾಧಿಸಲು ಸಾಧ್ಯವಾಗದೇ ಇರಬಹುದು, ನಮಗೆ ಬೇಕಾಗಿರುವುದು ಸಿಗದಿರಬಹುದು ಅಥವಾ ಬೇಕಾದ ಸಮಯದಲ್ಲಿ ಸಿಗದೇ ಇರಬಹುದು. ನಾವು ಅದನ್ನು ಭಗವಂತನಿಗೆ ಬಿಡಬೇಕು ಹಾಗೂ ಕಾಯಬೇಕು.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ನಮ್ಮ ಕಾರ್ಯಕರ್ತರ ಬಗ್ಗೆ ಯೋಚಿಸಿದಾಗ, ನನ್ನ ಮನ ಮುಟ್ಟುವ ಮೊದಲ ವಿಷಯವೆಂದರೆ ಅವರ ಉತ್ಸಾಹ. ಅದು ಅವರ ಅಂತರಂಗದಿಂದ ಬರುತ್ತದೆ ಹಾಗೂ ಅವರು ಮಕ್ಕಳನ್ನು ಭೇಟಿಮಾಡಿದಾಗ ಅದು ದ್ವಿಗುಣವಾಗುತ್ತದೆ. ಮಕ್ಕಳು ತಮ್ಮಲ್ಲಿ ಎಷ್ಟೊಂದು ಜೀವ ಶಕ್ತಿ, ಮುಗ್ಧತೆ ಹಾಗೂ ಪರಿಶುದ್ಧತೆಯನ್ನು ಹೊಂದಿರುತ್ತಾರೆಂದರೆ, ಅವರ ನಡುವೆ ಇದ್ದಾಗ, ಅವು ಯಾವುದೇ ವ್ಯಕ್ತಿಯ ಮನಮುಟ್ಟದಿರಲು ಸಾಧ್ಯವೇ ಇಲ್ಲ. ನನಗೆ ಸ್ಫೂರ್ತಿ ನೀಡುವ ಹಾಗೂ ಶಾಲಾ ಅಧಿಕಾರಿಗಳ ಮನ ಮುಟ್ಟುವ ನಮ್ಮ ಕಾರ್ಯಕರ್ತರ ಇತರ ಗುಣಗಳೆಂದರೆ – ಲೈಟ್ ಚಾನಲಿಂಗ್ ಬಗ್ಗೆ ಅವರಿಗಿರುವ ಗಾಢವಾದ ನಂಬಿಕೆ, ನಿಸ್ವಾರ್ಥ ಮನೋಭಾವ, ಪ್ರಾಮಾಣಿಕತೆ ಹಾಗೂ ಬೆಳಕಿನ ಬಗ್ಗೆ ಅರಿವನ್ನು ಹರಡಲು ಅವರಿಗಿರುವ ನಿಜವಾದ ಅಪೇಕ್ಷೆ.

ಅವರ ಕೊಡುಗೆ ಬಹುಶಃ ಪ್ರಪಂಚಕ್ಕೆ ತಿಳಿಯದೇ ಇರಬಹುದು ಆದರೆ ಬೆಳಕು ಅದನ್ನು ಗುರುತಿಸುತ್ತದೆ ಹಾಗೂ ತನ್ನ ಅಂತರಂಗದಲ್ಲಿ ಅವರಿಗೆ ಜಾಗ ನೀಡುತ್ತದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಶಾಲೆಗಳಲ್ಲಿ ಲೈಟ್ ಚಾನಲಿಂಗ್ ಕಲಿಸುವುದನ್ನು ಪ್ರಾರಂಭಿಸಿ 8 ವರ್ಷಗಳು ಕಳೆದಿವೆ. ಇದು ಒಂದು ಅದ್ಭುತವಾದ ಪಯಣ. ಈ 8 ವರ್ಷಗಳಲ್ಲಿ, ನಮ್ಮ ಕಾರ್ಯಕರ್ತರು, ಶಾಲಾ ಅಧಿಕಾರಿಗಳು, ಶಿಕ್ಷಕರು ಹಾಗೂ ಮಕ್ಕಳ ಜೊತೆ ಉತ್ತಮವಾದ ಸಂಬಂಧವನ್ನು ಸ್ಥಾಪಿಸಿದ್ದಾರೆ. ನಮಗೆ ಯಾವಾಗಲೂ ಆದರದ ಸ್ವಾಗತ ದೊರೆತಿದೆ ಹಾಗೂ ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆಯೂ ನಮಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಇದು ನಮ್ಮ ಕೆಲಸಕ್ಕೆ ಅವರು ನೀಡುವ ಪ್ರಾಮುಖ್ಯತೆಯನ್ನು ಮತ್ತು ನಮ್ಮ ಕಾರ್ಯಕರ್ತರನ್ನು ಅರ್ಥಮಾಡಿಕೊಂಡಿರುವುದನ್ನು ತೋರಿಸುತ್ತದೆ.

ಈ ವರ್ಷಗಳಲ್ಲಿ, ಅನೇಕ ಹೊಸ ಕಾರ್ಯಕರ್ತರು ನಮ್ಮ ಕೆಲಸಕ್ಕೆ ಸೇರ್ಪಡೆಯಾಗಿ ಹೊಸ ಹುರುಪು ಹಾಗೂ ಉತ್ಸಾಹವನ್ನು ತಂದಿದ್ದಾರೆ. ಹಲವಾರು ಹಿರಿಯ ಕಾರ್ಯಕರ್ತರು ಪ್ರಾರಂಭದಿಂದಲೂ ಕೆಲಸ ಮಾಡುತ್ತಿದ್ದು ಮುಂಬರುವ ವರ್ಷಗಳಿಗೆ ಬಲವಾದ ಅಡಿಪಾಯವನ್ನು ಹಾಕಿದ್ದಾರೆ. ಈ ಕೆಲಸ ಹೊಸಯುಗ ಪೂರ್ತಿಯಾಗಿ ಆರಂಭವಾಗುವವರೆಗೆ ಮುಂದುವರೆಯುತ್ತದೆ. ಈ ಮಹತ್ವದ ಯೋಜನೆಯಲ್ಲಿ ಪಾಲ್ಗೊಳ್ಳುತ್ತಿರುವ ನಾವು ಧನ್ಯರು.

**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.

ಫೋನ್: (080) 2846 5280, 99000 75280 (10am to 5pm), ಇ-ಮೇಲ್: info@lightagemasters.com

website : www.lightagemasters.com, www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

### ಬೆಂಗಳೂರು

**ಸೋಮವಾರದಿಂದ ಶುಕ್ರವಾರದವರೆಗೆ (ಸಂಜೆ 7 - 7.15)**
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ
☎ 9084121545 ಶ್ರೀ ಕೆ. ಚಂದ್ರಶೇಖರ್

**ಸೋಮವಾರ (ಸಂಜೆ 6.30 - 7)**
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಬುಧವಾರ (ಸಂಜೆ 6.30 - 7)**
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಶುಕ್ರವಾರ (ಸಂಜೆ 6.30 - 7)**
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ ಭೋಸೆಕರ್

**ಶುಕ್ರವಾರ (ಮಧ್ಯಾಹ್ನ 12.00)**
ಸಿದ್ಧಿ ವಿನಾಯಕ ದೇವಸ್ಥಾನ, 59/1,
ಹಚಿನ್ಸ್ ರಸ್ತೆ, 3ನೇ ಅಡ್ಡರಸ್ತೆ, ಕೂಕ್ ಟೌನ್
☎ 9980205803 ಶ್ರೀಮತಿ ನಿರ್ಮಲ ಬಾಲ

**ಶನಿವಾರ (ಸಂಜೆ 6.30 - 7)**
ಬಲಮುರಿ ಮಹಾಗಣಪತಿ, ಶ್ರೀ ರಾಜರಾಜೇಶ್ವರಿ ಮತ್ತು ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ,
8ನೇ ಅಡ್ಡರಸ್ತೆ, ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸ್ಯಾಟ್‌ಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.



ಊರ್ಲಿಯಲ್ಲಿನ 'ಲೈಟ್ ಆಫ್ ಲೈಫ್ ಟ್ರಸ್ಟ್ ಗ್ರೂಪ್' ಸದಸ್ಯರು ಆಗಸ್ಟ್ 19 ರಂದು ಬೆಳಕನ್ನು ಚಾನಲ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ❖ ನಾವು ಈ ಪ್ರಪಂಚವನ್ನು ಪ್ರೀತಿಸಬೇಕು. ನಮ್ಮ ಸುತ್ತಲಿನ ಪ್ರತಿಯೊಂದಕ್ಕೂ ಒಳ್ಳೆಯವರಾಗಿರಬೇಕು. ನಮ್ಮಲ್ಲಿ ಹಾಗೂ ನಮ್ಮ ಸುತ್ತಲೂ ಇರುವ ಸೌಂದರ್ಯವನ್ನು ನಾವು ಮೆಚ್ಚಬೇಕು, ಏಕೆಂದರೆ ಇವೆಲ್ಲವೂ ದೇವರಿಂದಲೇ ಬಂದಿವೆ.
- ❖ ನೋವನ್ನೂ ಒಳಗೊಂಡಂತೆ ಎಲ್ಲವನ್ನೂ ನಾವು ಮಂದಸ್ಮಿತರಾಗಿ ಒಪ್ಪಿಕೊಳ್ಳಬೇಕು.
- ❖ ನಾವು ಯಾವುದಕ್ಕೂ ಪ್ರಾರ್ಥನೆ ಮಾಡುವ ಅವಶ್ಯಕತೆ ಇಲ್ಲ. ನಮಗೆ ಬೇಕಾಗಿರುವುದನ್ನು ದೇವರು ನೀಡುತ್ತಾನೆ.
- ❖ ದೇವರು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ ಹಾಗೂ ಅದನ್ನು ನಾವು ಅನುಸರಿಸುವುದಿಲ್ಲವಾದ್ದರಿಂದ, ಅದರ ಪರಿಣಾಮಗಳನ್ನು ನಾವು ಎದುರಿಸಬೇಕಾಗುತ್ತದೆ. ಅವನು ನಮ್ಮನ್ನು ಪ್ರೀತಿಸುತ್ತಾನೆ, ದೇವರನ್ನು ಅರ್ಥ ಮಾಡಿಕೊಳ್ಳುವುದು ಸುಲಭವಲ್ಲ. ನಡೆಯುತ್ತಿರುವ ಪ್ರತಿಯೊಂದು ಸಂಗತಿಯೂ ಅವನಿಗೆ ತಿಳಿದಿದೆ.
- ❖ ಸೃಷ್ಟಿಯ ಇಡೀ ಆಧಾರವೇ ಪ್ರೀತಿ. ಈ ಸತ್ಯವನ್ನು ನಮಗೆ ತಿಳಿಯಲು ಸಾಧ್ಯವಾದರೆ, ಪ್ರತಿಯೊಂದನ್ನೂ ನಾವು ಒಪ್ಪಿಕೊಳ್ಳುತ್ತೇವೆ. ಈ ಸ್ಥಳ ... ಈ ಭೂಮಿ ... ಎಲ್ಲವೂ ಒಂದು ಶಾಲೆ ಇದ್ದಂತೆ.
- ❖ ನಾವು ಕೆಲವರನ್ನು ಇಷ್ಟಪಡುತ್ತೇವೆ, ಮತ್ತೆ ಕೆಲವರನ್ನು ಇಷ್ಟಪಡುವುದಿಲ್ಲ ಹಾಗೂ ಕೆಲವರನ್ನು ದ್ವೇಷಿಸುತ್ತೇವೆ. ಇವೆಲ್ಲವುಗಳನ್ನು ಮೀರಿ ಮೇಲೇರುವ ಕಾಲ ಬಂದಿದೆ. ಈ ಸಾಧಾರಣ ಮಾನವ ಸ್ವಭಾವದಿಂದ ಹೊರಬರಲು ಇದೊಂದು ಅವಕಾಶ.
- ❖ ಸ್ವಚ್ಛತೆ ಆಧ್ಯಾತ್ಮಿಕವಾದದ್ದು. ಹೊರಗಿನ ಸ್ವಚ್ಛತೆ, ಒಳಗಿನ ಸ್ವಚ್ಛತೆಯ ಅನುಭವವನ್ನೂ ನಮಗೆ ನೀಡುತ್ತದೆ. ದೇಹದ ಮಟ್ಟದಲ್ಲಿನ ಸ್ವಚ್ಛತೆ ಸಹಜವಾಗಿಯೇ ನಮ್ಮ ಮನಸ್ಸನ್ನು ಸ್ವಚ್ಛಗೊಳಿಸುತ್ತದೆ; ನಮ್ಮ ಆಲೋಚನೆಗಳನ್ನು ಸ್ವಚ್ಛಗೊಳಿಸುತ್ತದೆ.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5143 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 27.83 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | : | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | : | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಬೆಳಕೇ ಭರವಸೆ

ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ

ಈ ಪ್ರಪಂಚದ ಎಲ್ಲಾ ಸಮಸ್ಯೆಗಳನ್ನು ಬೆಳಕು ಬಗೆಹರಿಸಬಲ್ಲದೆ? ವೈಯಕ್ತಿಕವಾದ ಅಥವಾ ಜಾಗತಿಕವಾದ ಎಲ್ಲಾ ಸಮಸ್ಯೆಗಳಿಗೆ ಬೆಳಕಿನಲ್ಲಿ ಪರಿಹಾರವಿದೆ. ಈ ಮಾನವ ಮಟ್ಟದಲ್ಲಿ ಬಗೆಹರಿಸಲಸಾಧ್ಯವೆನಿಸುವಂತಹ ಅತ್ಯಂತ ಕ್ಲಿಷ್ಟಕರವಾದ ಸಮಸ್ಯೆಗಳನ್ನು ಬಗೆಹರಿಸಲು ಬೇಕಾಗುವಂತಹ ವಿವೇಕ ಬೆಳಕಿನಲ್ಲಿದೆ. ಬೆಳಕು ಹೊಂದಿರುವಂತಹ ಪರಿಹಾರಗಳು ನಾವು ಬಯಸಿದ ರೀತಿಯಲ್ಲಿ ಇಲ್ಲದಿರಬಹುದು. ನಮ್ಮ ದೂರದೃಷ್ಟಿ ಸೀಮಿತವಾಗಿರಬಹುದು. ಆದರೆ ಬೆಳಕು ಉನ್ನತ ಮಟ್ಟದ ಪರಿಹಾರಗಳನ್ನು ಹೊಂದಿದೆ. ನಮ್ಮ ಅಹಂಗೆ ಅಧೀನರಾಗಿ, ನಮ್ಮ ನಿಲುವನ್ನು ಬಿಟ್ಟುಕೊಡಲು ಸಿದ್ಧರಿಲ್ಲದ ಕಾರಣ, ಬೆಳಕು ನೀಡಿದ ಪರಿಹಾರಗಳನ್ನು ನಾವು ವಿರೋಧಿಸಬಹುದು ಅಥವಾ ನಿರಾಕರಿಸಬಹುದು.

ಈ ಸವಾಲನ್ನು ನಾವು ವೈಯಕ್ತಿಕ ಮಟ್ಟದಲ್ಲಿ ಅಥವಾ ಸಮಾಜದ ಮಟ್ಟದಲ್ಲಿ ಅಥವಾ ರಾಷ್ಟ್ರ ಮಟ್ಟದಲ್ಲಿ ಅಥವಾ ಜಾಗತಿಕ ಮಟ್ಟದಲ್ಲಿ ಎದುರಿಸುತ್ತೇವೆ ಎಂದು ನನಗನಿಸುತ್ತದೆ. ಬೇರೆ ಬೇರೆ ಮಟ್ಟಗಳಲ್ಲಿರುವ ಜನರು ತಮ್ಮ ತಮ್ಮ ನಿಲುವನ್ನು ಬಿಟ್ಟುಕೊಡದಿರುವ ಕಾರಣ ಸಮಸ್ಯೆಗಳು ಹುಟ್ಟುತ್ತವೆ ಅಥವಾ ಬಹುಕಾಲ ಉಳಿದುಬಿಡುತ್ತವೆ. ಬೆಳಕು ನೀಡುವ ಪರಿಹಾರವು ಜನರ ಮೂಲಕ ಪ್ರಕಟವಾಗಬೇಕಾಗಿದೆ. ಅಂದರೆ, ಸಮಸ್ಯೆಗಳಿಗೆ ಹೊಣೆಯಾದ ಜನರು ಬೆಳಕನ್ನು ಹಾಗೂ ಅದು ನೀಡುವ ಪರಿಹಾರವನ್ನು ಒಪ್ಪಿಕೊಳ್ಳಬೇಕಾಗಿದೆ, ಅದನ್ನು ಅವರು ತಮ್ಮ ಅಂತರ್ಬೋಧೆಯಿಂದ ಪಡೆಯುತ್ತಾರೆ.

ನಾವು ಬೆಳಕನ್ನು ತೆರೆದ ಮನಸ್ಸಿನಿಂದ ಒಪ್ಪಿಕೊಂಡು ನಮ್ಮ ಅಂತರ್ವಾಣಿಯನ್ನು ಕೇಳಿಸಿಕೊಂಡರೆ, ವೈಯಕ್ತಿಕ ಮಟ್ಟದಲ್ಲಿನ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಿಕೊಳ್ಳಬಹುದು. ಜಾಗತಿಕ ಮಟ್ಟದ ಸಮಸ್ಯೆಗಳನ್ನು ಬಗೆಹರಿಸಲು ಈ ಪ್ರಪಂಚದಲ್ಲಿನ, ಜವಾಬ್ದಾರಿಯ ಸ್ಥಾನಗಳಲ್ಲಿರುವ ಅಧಿಕಾರವುಳ್ಳ ಜನರು ಬೆಳಕನ್ನು ಒಪ್ಪಿಕೊಳ್ಳಬೇಕಾಗಿದೆ.

ನಾವು ಬೆಳಕನ್ನು ಚಾನಲ್ ಮಾಡಿದಾಗ, ಈ ಪ್ರಪಂಚದಲ್ಲಿನ ಜನರಿಗೆ ಹೆಚ್ಚು ಬೆಳಕು ದೊರೆಯುವಂತೆ ಮಾಡುತ್ತೇವೆ. ಅಧಿಕಾರವುಳ್ಳ ಜನರು ಅದನ್ನು ನಿರಾಕರಿಸಿದರೂ ಕೂಡ, ಹೆಚ್ಚು ಜನರು ಈ ಬೆಳಕನ್ನು ಸ್ವೀಕರಿಸಿದರೆ ಈ ಪ್ರಪಂಚದಲ್ಲಿ ಸಕಾರಾತ್ಮಕ ಕಂಪನಗಳನ್ನು ಅವರು ಬಲಗೊಳಿಸಬಹುದು. ಈ ಕಂಪನಗಳು ಅನ್ಯಾಯ ಹಾಗೂ ಅಂಧಕಾರವನ್ನು ನಿರಾಕರಿಸುತ್ತವೆ. ಸಕಾರಾತ್ಮಕತೆಯು ಹೆಚ್ಚು ಬಲಗೊಳ್ಳುತ್ತಾ ಹೋದಂತೆಲ್ಲಾ, ಅಧಿಕಾರದಲ್ಲಿರುವ ಜನರು ಈ ಪರಿಹಾರಗಳನ್ನು ಬಲವಂತವಾಗಿಯಾದರೂ ಒಪ್ಪಿಕೊಳ್ಳಬೇಕಾಗುತ್ತದೆ, ಇಲ್ಲದಿದ್ದರೆ ಅವರು ತಮ್ಮ ಅಧಿಕಾರ ಕಳೆದುಕೊಳ್ಳಬೇಕಾಗಬಹುದು.

ಈ ರೀತಿಯಾಗಿ ವೈಯಕ್ತಿಕ ಹಾಗೂ ಜಾಗತಿಕ ಮಟ್ಟಗಳಲ್ಲಿ ಬದಲಾವಣೆಗಳು ನಿಧಾನವಾಗಿ ಉಂಟಾಗುತ್ತವೆ.

ಲೈಟ್ ಚಾನಲಿಂಗ್ ಜೀವನ ಬದಲಾಯಿಸುವ, ವಿಧಿ ಬದಲಾಯಿಸುವ ಅಭ್ಯಾಸವಾಗಿದೆ. ಅದು ವೈಯಕ್ತಿಕ ಹಾಗೂ ಈ ಪ್ರಪಂಚದ ವಿಧಿಯನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿದೆ. ಹೆಚ್ಚು ಹೆಚ್ಚು ಜನರು ಚಾನಲಿಂಗ್‌ನಲ್ಲಿ ನಮ್ಮನ್ನು ಜೊತೆಗೂಡಿದಾಗ ಹಾಗೂ ನಮ್ಮ ಚಾನಲಿಂಗ್‌ನ ತೀವ್ರತೆ ಹೆಚ್ಚಾದಾಗ ಈ ಬದಲಾವಣೆಗಳು ಉಂಟಾಗುವುದನ್ನು ನಾವು ಕಾಣುತ್ತೇವೆ.

ಉತ್ತಮ ಪ್ರಪಂಚಕ್ಕಾಗಿ ಬೆಳಕೇ ಭರವಸೆ.

■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ಸಹಾಯ ಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿ ಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳ ಬಹುದು.

### ಸೋಲಾಪೂರ್
**ಸೋಮವಾರ ಮತ್ತು ಗುರುವಾರ (ಸಂಜೆ 7 - 7.15)**
ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಲ್
☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಮೀರಜ್
**ಗುರುವಾರ (ಸಂಜೆ 7.45)**
ಶ್ರೀ ಶಿವರುದ್ರ ಬಿ. ಬೆಲಗನ್ವಿ,
A-Gat Plot No-135,
C/o ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
☎ 9822421463 ಶ್ರೀ ಮಹಾಜನ್

### ಚೆನ್ನೈ
**ಶನಿವಾರ (ಬೆಳಿಗ್ಗೆ 10 - 10.30)**
ನಂ. 481, ಸಾಯಿಪ್ರೇಮ್, 19ನೇ ರಸ್ತೆ,
4ನೇ ಸೆಕ್ಟರ್, ಕೆ. ಕೆ. ನಗರ
☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್

### ಪುಣೆ
**ಶನಿವಾರ (ಸಂಜೆ 7 - 7.30)**
3-B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ
☎ 9011038169 ಶ್ರೀ ಆಶುತೋಶ್ ನವನ್‌ಗುಲ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯ ಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವ ಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



## ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ

ಕಾಫಿ ಕುಡಿಯುವುದಕ್ಕೆ ಮುನ್ನವೇ ನನ್ನ ದಿನ ಬೆಳಕಿನೊಂದಿಗೆ ಪ್ರಾರಂಭವಾಗುತ್ತದೆ. ಬೆಳಕು ಒಂದು ರೀತಿಯ ಬಲವರ್ಧಕ. ನನ್ನ ಚೈತನ್ಯದ ಮಟ್ಟ ಬೆಳಗಿನಿಂದ ಸಂಜೆವರೆಗೂ ಒಂದೇ ಸಮನಾಗಿರುತ್ತದೆ, ನಾನು ದೇವಸ್ಥಾನದಲ್ಲಿ ಇದ್ದೇನೆ ಎಂಬ ಭಾವನೆ ಮೂಡುತ್ತದೆ. ಪ್ರತಿದಿನ ನಮ್ಮ ಶಾಲೆಯ ಅಸೆಂಬ್ಲಿಯಲ್ಲಿ 7 ನಿಮಿಷಗಳ ವರೆಗೆ ಮಾಡುವ ಲೈಟ್ ಚಾನಲಿಂಗ್ ಅಭ್ಯಾಸದಿಂದ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರುಗಳು ಪ್ರಯೋಜನಗಳನ್ನು ಪಡೆದುಕೊಂಡಿದ್ದಾರೆ.

–ಸ್ವರೂಪರಾಣಿ, ಮುಖ್ಯೋಪಾಧ್ಯಾಯರು, ನ್ಯೂ ಕಾರ್ಮೆಲ್ ಸ್ಕೂಲ್, ಹೆಗ್ಗನಹಳ್ಳಿ, ಬೆಂಗಳೂರು

ಜೂನ್ ತಿಂಗಳ 24ರಂದು ಯಲವಾಡಿ ಹಳ್ಳಿಯ ಶಾಲೆಯೊಂದರಲ್ಲಿ ಲೈಟ್ ಚಾನಲಿಂಗ್ ಸೆಷನ್‌ವೊಂದನ್ನು ನಡೆಸಿದೆವು. ಆ ಸೆಷನ್ನಿನಲ್ಲಿ, ಬೆಳಕು ನಮಗೆ ಎಲ್ಲ ರೀತಿಯಲ್ಲೂ ಹೇಗೆ ಸಹಾಯ ಮಾಡುತ್ತದೆ ಎಂದು ವಿವರವಾಗಿ ಹೇಳಿದೆ. ನಾವು ಮೋಡಗಳಿಗೂ ಬೆಳಕನ್ನು ಕಳುಹಿಸಿದೆವು. ಆ ಸೆಷನ್ ತುಂಬಾ ಪ್ರಶಾಂತವಾಗಿತ್ತು ಮತ್ತು ಚೆನ್ನಾಗಿತ್ತು. ಕಳೆದ ವರ್ಷ ನಾವು ಮೋಡಗಳಿಗೆ ಬೆಳಕು ಕಳುಹಿಸಿದ್ದರಿಂದ ಲಾತೂರ್‌ನಲ್ಲಿ ಹೇಗೆ ಮಳೆಯಾಯಿತು ಎನ್ನುವುದನ್ನು, ಸೆಷನ್ ಮುಗಿದ ನಂತರ ಅವರಿಗೆ ಹೇಳಿದೆ. ಆ ಅನುಭವವನ್ನು ಅವರೊಂದಿಗೆ ಹಂಚಿಕೊಳ್ಳುತ್ತಿರುವಾಗಲೇ ಮಳೆ ಸುರಿಯಲಾರಂಭಿಸಿತು! ಐದು ನಿಮಿಷಗಳವರೆಗೆ ಮಳೆ ಬಂದು ನಿಂತಿತು. ವಿದ್ಯಾರ್ಥಿಗಳೆಲ್ಲರೂ ಅತಿ ಸಂತೋಷದಿಂದ ಚಪ್ಪಾಳೆ ತಟ್ಟಿದರು.

–ಸಂತೋಷ್ ಕೋರೆ, ಕಾರ್ಯಕರ್ತ

09–07–2017ರಂದು ಕ್ರೈಸ್ಟ್ ಗ್ಲೋಬಲ್ ಸ್ಕೂಲ್‌ನಲ್ಲಿ ನಡೆಸಿದ ಲೈಟ್ ಚಾನಲಿಂಗ್‌ನ ಪ್ರಮುಖ ಅಂಶವೆಂದರೆ, ಮಕ್ಕಳು ಲೈಟ್ ಚಾನಲಿಂಗ್ ಪ್ರಾರಂಭಿಸಿದಾಗ, ತುಂಬಾ ಶಬ್ದ ಮಾಡುತ್ತಿದ್ದ ಬೋರ್‌ವೆಲ್ ತಕ್ಷಣ ನಿಶ್ಶಬ್ದವಾಯಿತು. ಮೌನವಾಗಿ ಮಾಡಿದ ಪ್ರಾರ್ಥನೆಗೆ ಉತ್ತರ ದೊರೆಯಿತು. ಬೆಳಕಿಗೆ ಕೃತಜ್ಞತೆಗಳು.

–ವಿಜಯ ಕುಮಾರ್, ಕಾರ್ಯಕರ್ತ

ವಿಶ್ವ ಚಾನಲ್ಸ್ ದಿನ ಗುಲಾಬ್‌ಬಾಯಿ ಕಟಾರಿಯ ಶಾಲೆಯಲ್ಲಿ ನಡೆಸಿದ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಗಾಢವಾದ ಬೆಳಕಿನ ಅನುಭವವಾಯಿತು. ಚೈತನ್ಯಗಳು ಸ್ಪಷ್ಟವಾಗಿ ಅನುಭವಕ್ಕೆ ಬರುತ್ತಿದ್ದವು. ಸೆಷನ್ ಮುಗಿದ ನಂತರ ಒಬ್ಬ ಶಿಕ್ಷಕಿ, ಈ ತಂತ್ರ ಅವರಿಗೆ ಸಮಾಧಾನ ತಂದಿತು ಹಾಗೂ ಇದರ ಬಗ್ಗೆ ಮೊದಲೇ ಗೊತ್ತಾಗಿದ್ದರೆ, ಓಂ ಮಂತ್ರ ಜಪಿಸುವುದನ್ನು ಕಡಿಮೆ ಮಾಡುತ್ತಿದ್ದೆ, ಎಂದು ಹೇಳಿದರು.

ಮತ್ತೊಬ್ಬ ಶಿಕ್ಷಕಿ ಸಹ ತಮ್ಮ ಅನುಭವವನ್ನು ಹಂಚಿಕೊಂಡರು. ಅವರು ಪ್ರಯಾಣಿಸುತ್ತಿದ್ದ ಬಸ್ಸು ದಾರಿಯಲ್ಲಿ ಕೆಟ್ಟು ಹೋಗಿತ್ತು. ಬೇರೊಂದು ಬಸ್ ಹತ್ತಲು ಅವರು ಹಿಂದಿನ ಎರಡು ಬಸ್ ನಿಲ್ದಾಣಗಳವರೆಗೆ ವಾಪಸ್ಸು ನಡೆಯಬೇಕಾಗಿ ಬಂತು. ಇದರಿಂದ ಅವರಿಗೆ ಸಮಯಕ್ಕೆ ಸರಿಯಾಗಿ ಶಾಲೆಗೆ ಹೋಗುವುದಕ್ಕೆ ಆಗುವುದಿಲ್ಲವೆಂಬ ಚಿಂತೆ ಕಾಡಿತ್ತು. ಆದರೆ ಲೈಟ್ ಚಾನಲಿಂಗ್ ಮಾಡಿದ ನಂತರ, ಬೆಳಗಿನ ಮಾನಸಿಕ ಮತ್ತು ದೈಹಿಕ ಪರಿಶ್ರಮಗಳ ಹೊರತಾಗಿಯೂ ಅವರು ಉಲ್ಲಸಿತರಾದರು ಮತ್ತು ಚೈತನ್ಯಭರಿತರಾದರು.

ಈ ಲೈಟ್ ಚಾನಲಿಂಗ್ ನಿಜವಾಗಿಯೂ ಸಹಾಯ ಮಾಡುತ್ತದೆ ಎಂದು ಇನ್ನೊಬ್ಬ ಶಿಕ್ಷಕಿ, ಹೇಮಾ ಗೋರೆ ಅವರು ತಿಳಿಸಿದರು. ಈ ಸೆಷನ್ ಅವರಿಗೆ ಸಂತೋಷ ತಂದಿದೆ ಎಂದು ಹೇಳಿದರು.

–ಗೀತಾ ಜೋಶಿ, ಕಾರ್ಯಕರ್ತೆ

ಲೈಟ್ ಚಾನಲಿಂಗ್ ಪ್ರತಿದಿನ ನನ್ನಲ್ಲಿ ಒಂದು ಹೊಸದಾದ ಒಳ್ಳೆಯ ಅಂಶವನ್ನು ಹೊರತರುತ್ತದೆ, ಅದನ್ನು ನನ್ನಲ್ಲಿ ಹೆಚ್ಚು ಅಭಿವೃದ್ಧಿಪಡಿಸಿಕೊಂಡು ನನ್ನ ವಿದ್ಯಾಭ್ಯಾಸದಲ್ಲಿ ಅಳವಡಿಸಿಕೊಳ್ಳಲು ಬಯಸುತ್ತೇನೆ. ನನ್ನ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿ ಸಮಾಧಾನದಿಂದ ಇದೆ ಎಂದೆನಿಸುತ್ತದೆ.

–ಜಾಹ್ನವಿ ಬಿ ಕೆ, 10ನೇ ತರಗತಿ, ಬಸವೇಶ್ವರ ಹೈಸ್ಕೂಲ್, ಬ್ಯಾಟರಾಯನಪುರ, ಬೆಂಗಳೂರು

ಪ್ರತಿದಿನ 7 ನಿಮಿಷಗಳ ಕಾಲ ಲೈಟ್ ಚಾನಲಿಂಗ್ ಮಾಡುವುದರಿಂದ ನನ್ನ ಮನಸ್ಸು ಪ್ರಶಾಂತವಾಗಿದೆ. ಇಡೀ ಪ್ರಪಂಚಕ್ಕೆ ಬೆಳಕನ್ನು ಕಳುಹಿಸುವುದು ನನಗೆ ತುಂಬಾ ಸಂತೋಷ ತಂದಿದೆ. ನನ್ನ ಏಕಾಗ್ರತೆ ಹೆಚ್ಚಾಗಿದೆ ಮತ್ತು ನನ್ನ ನಡವಳಿಕೆ ಉತ್ತಮಗೊಂಡಿದೆ. ಅಹಂ ಅಥವಾ ಹೊಟ್ಟೆಕಿಚ್ಚು ನನ್ನಲ್ಲಿ ಇಲ್ಲ.

–ಭೂಮಿಕ ಎನ್, 10ನೇ ತರಗತಿ, ಬಸವೇಶ್ವರ ಹೈಸ್ಕೂಲ್, ಬ್ಯಾಟರಾಯನಪುರ

ಲೈಟ್ ಚಾನಲಿಂಗ್ ನನಗೆ ಒಂದು ಒಳ್ಳೆಯ ಅನುಭವ. ಅದು ನನ್ನಲ್ಲಿ ಪ್ರಶಾಂತತೆಯನ್ನು ಮೂಡಿಸಿ, ಒತ್ತಡವನ್ನು ನಿವಾರಿಸಿತು. ಒಂದು ನಿಮಿಷ ಬೆಳಕು ನನ್ನಲ್ಲಿತ್ತು ಎಂದೆನಿಸಿತು. ಪ್ರತಿದಿನ ಇದರ ಅಭ್ಯಾಸ ಮಾಡುವುದರಿಂದ ಇದು ನನ್ನನ್ನು ಒಳ್ಳೆಯ ವ್ಯಕ್ತಿಯನ್ನಾಗಿ ಮಾಡುತ್ತದೆ.

–ಅಶ್ವಿನಿ ಟಿ, 10ನೇ ತರಗತಿ, ಬಸವೇಶ್ವರ ಹೈಸ್ಕೂಲ್, ಬೆಂಗಳೂರು

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ